# ಇಳಿವಯಸ್ಸಿನವರ ಏರು ಚಾರಣ





■ ಚಿತ್ರ– ಲೇಖನ: **ಧರ್ಮಾನಂದ ಶಿರ್ವ**

ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡ ದರ್ಶನದ ಸುತ್ತಾಟ ಚಾರಣವಾಗಿ ರೂಪುಗೊಳ್ಳಬಹುದೆಂದು ನಾವು ನಿರೀಕ್ಷಿಸಿರಲಿಲ್ಲ. ಯಾಕೆಂದರೆ ಕಪ್ಪತಗುಡ್ಡದ ಸರಿಯಾದ ಕಲ್ಪನೆ ನಮಗಾರಿಗೂ ಇರಲಿಲ್ಲ.

ಕಥೆಗಾರ ಮೇಣೆದಾಳಿನ ಶೇಖರ ವೀ. ಸರನಾಡಗೌಡರ್, ತಾವರೆಗೇರಾದ ವಾಸುದೇವನ್ ಅಯ್ಯರ್, ಕೊಪ್ಪಳದ ಮಿತ್ರ ಕ. ಶಿ. ಕುಡಗುಂಟಿ, ದತ್ತು ಯಾನೆ ದತ್ತಾತ್ರೇಯ ಅಳವಂಡಿ ಚಾರಣಕ್ಕೆ ಜತೆಯಾದರು. ನಮ್ಮದು ಒಟ್ಟು ಐದು ಜನರ ತಂಡ. ಸ್ಥಳೀಯರು ‘ನಿಮ್ಮಿಂದ ಗುಡ್ಡವೇರಲು ಸಾಧ್ಯವಿಲ್ಲ ಬಿಡಿ...’ ಅಂದರು. ಅವರು ಅನುಮಾನಿಸಿದ್ದು ಸಹಜವೇ. ಕಾರಣ ನಾವೆಲ್ಲರೂ ಅರವತ್ತು ದಾಟಿದ ಹಿರಿಯ ನಾಗರಿಕರು!

ಮಣ್ಣಿನ ರಸ್ತೆಯಲ್ಲಿ ಹೆಜ್ಜೆ ಹಾಕುವಾಗ ಬೋಳಾದ ನೆತ್ತಿ ಕಾದ ಕಾವಲಿಯಂತೆ ಸುಡಲಾರಂಭಿಸಿತು. ಹಚ್ಚಹಸುರಿನ ಪೊದೆ, ಮರಗಳಿಂದ ಮೈತುಂಬಿಕೊಂಡಿದ್ದ ಗಿರಿಸಮೂಹ ನಮ್ಮನ್ನು ಆವರಿಸಿಕೊಂಡಿತ್ತು. ಬೆಟ್ಟವೇರುವ ಮೊದಲರ್ಧ ಭಾಗದ ಮಣ್ಣಿನ ರಸ್ತೆ ಸುಗಮವಾಗಿರಲಿಲ್ಲ. ರಸ್ತೆಯುದ್ದಕ್ಕೂ ಬಿದ್ದಿರುವ ಕಬ್ಬಿನಂಶದ ಸಣ್ಣ ಕಲ್ಲುಗಳು ನಡಿಗೆಯನ್ನು ನಿಧಾನವಾಗಿಸಿದವು. ಏರು ಹಾದಿ ಬೇರೆ.

ಕಲ್ಲು ಶಿಖರವೊಂದರ ಅಂಚಿನಲ್ಲಿ ನಿಂತು ಏರಬೇಕಾದ ಬೆಟ್ಟದ ಕಡೆ ನೋಡಿದಾಗ ನಿಜವಾದ ಚಾರಣದ ಅರ್ಥ ನಮ್ಮೆದುರು ತೆರೆದುಕೊಂಡಿತು. ಇದುವರೆಗೆ ನಾವು ಬೆಟ್ಟದ ಅರ್ಧ ಹಾದಿಯನ್ನು ಮಾತ್ರ ಕ್ರಮಿಸಿದ್ದೆವು. ಮುಂದೆ ರಸ್ತೆಯೇ ಇಲ್ಲದ ಏರುಹಾದಿ. ನಾವು ನಡೆದದ್ದೇ ಹಾದಿಯೆನ್ನುವ ಕಿರುಕಲ್ಲ ದಾರಿ. ಇಟ್ಟ ಹೆಜ್ಜೆ ಜಾರಬಹುದೇನೋ ಎನ್ನುವ ಆತಂಕ ಬೇರೆ. ನಿಧಾನಕ್ಕೆ ಏರತೊಡಗಿದೆವು. ನಡುವೆ ಸಿಕ್ಕ ಎತ್ತರದ ಬಂಡೆ ಬಳಿ ದಣಿವಾರಿಸಿಕೊಳ್ಳಲು ನಿಂತಿದ್ದ ನಮಗೆ ಹುಲುಸಾಗಿ ಬೆಳೆದು ನಿಂತ ಲಂಟಾನ, ಕಾರೇಹಣ್ಣು, ಕೌಳಿಕಾಯಿ, ಎಕ್ಕೆಗಿಡಗಳ ಸಮಗ್ರ ಪರಿಚಯವಾಯಿತು. ಅವುಗಳ ಜಾತಿ, ಪ್ರಬೇಧಗಳು ಮತ್ತವುಗಳ ಔಷಧೀಯ ಗುಣಗಳ ಳ ಬಗ್ಗೆ ಕಶಿಕು ವಿವರಿಸಿದರು.

ಕಪ್ಪತಗುಡ್ಡ ಕಬ್ಬಿಣದ ಅದಿರಿಗೆ ಮಾತ್ರ ಹೆಸರುವಾಸಿಯಲ್ಲ, ಚಿನ್ನದ ನಿಕ್ಷೇಪವೂ ಇಲ್ಲಿದೆ ಎಂದು ಇತ್ತೀಚಿನ ಸಂಶೋಧನೆಗಳ ವಿವರವನ್ನು ಶೇಖರಗೌಡರು ಉಸುರಿದಾಗ ನಮಗೆ ಚಿನ್ನದ ಬೆಟ್ಟವೇರುವಂತೆ ಭಾಸವಾಯಿತು. ಹಾದಿಗೆ ಹಾಸಿದಂತೆ ಬಿದ್ದ ಸಮತಟ್ಟಾದ ವರ್ಣರಂಜಿತ ಕಲ್ಲುಗಳು ಕೆಲವೆಡೆ ಅದ್ಭುತವಾದ ಅಮೂರ್ತ ಕಲೆಗಳನ್ನು ಸೃಜಿಸಿದ್ದವು.